(ಇಂದು ದಿನಾಂಕಃ 02–08–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ -

1) ಸಾಕ್ಷಿಗೆ ಈಗ ಒಂದು ಮೊರಬ ಗ್ರಾಮ ನಕಾಶೆಯನ್ನು ತೋರಿಸಿ ಅದು ನಮ್ಮ ಗ್ರಾಮದ ನಕಾಶೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಗುರುತಿಸಲು ಪ್ರತಿವಾದ ಪರ ವಕೀಲರು ತಕರಾರನ್ನು ಮಾಡಿದ್ದು ಆದರೆ ಸಾಕ್ಷಿ ಅದನ್ನು ಒಪ್ಪಿಕೊಂಡ ಕಾರಣ ಅದನ್ನು ಪುರಾವೆಯ ಷರತ್ತಿಗೆ ಒಳಪಟ್ಟು ನಿ**.**ಪಿ**.17** ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-17 ನ್ನು ತೋರಿಸಿ ಅದರಲ್ಲಿ ಸರ್ವೆ ಸಂಖ್ಯೆ 108 ರ ದಕ್ಷಿಣಕ್ಕೆ ಸರ್ವೆ ಸಂಖ್ಯೆ 107 ಇರುತ್ತದೆ ಎಂದರೆ ಸರಿ. ಸರ್ವೆ ಸಂಖ್ಯೆ 107 ರ ದಕ್ಷಿಣಕ್ಕೆ ಸರ್ವೆ ಸಂಖ್ಯೆ 104 ಎಂದರೆ ಸರಿ. ಸರ್ವೆ ಸಂಖ್ಯೆ 104 ರ ದಕ್ಷಿಣಕ್ಕೆ ಸರ್ವೆ ಸಂಖ್ಯೆ 101 ಎಂದರೆ ಸರಿ.

2) ಸಾಕ್ಷಿಗೆ ಈಗ ವಾದ ಪತ್ರದ ಲಗತ್ತು ಹಾತನಕಾಶೆಯನ್ನು ತೋರಿಸಿ ಸರ್ವೆ ಸಂಖ್ಯೆ 108/1 ರ ದಕ್ಷಿಣಕ್ಕೆ ಸರ್ವೆ ಸಂಖ್ಯೆ 107/1 ಎಂದರೆ ಸರಿ. ಸರ್ವೆ ಸಂಖ್ಯೆ 107/1 ರ ದಕ್ಷಿಣಕ್ಕೆ ಸರ್ವೆ ಸಂಖ್ಯೆ 104/1 ಎಂದರೆ ಸರಿ. ಸರ್ವೆ ಸಂಖ್ಯೆ 104/1 ರ ದಕ್ಷಿಣಕ್ಕೆ ಸರ್ವೆ ಸಂಖ್ಯೆ 101/1+2+3/ಅ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ಸಂಖ್ಯೆ 104/1 ಹಾಗೂ ಸರ್ವೆ ಸಂಖ್ಯೆ 101/1+2+3/ಅ ರ ನಡುವೆ 3 ಜಮೀನುಗಳು ಬರುತ್ತವೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಕಚ್ಚಾನಕಾಶೆ ಅಥವಾ ಹಾತನಕಾಶೆಯನ್ನು ಲಗತ್ತಿಸಿಲ್ಲ. ಅವಶ್ಯಕತೆ ಬಂದರೆ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. 3 ಆಸ್ತಿಗಳು ಇದ್ದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿದ ಬಗ್ಗೆ ಕೇಳಲಾಗಿ, ಸಾಕ್ಷಿಯು ಪ್ರತಿವಾದ ಪತ್ರವನ್ನು ಪರಿಶೀಲಿಸಿ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ.

3) ಸಾಕ್ಷಿಗೆ ನಿಪಿ-17 ನ್ನು ತೋರಿಸಿ ಸರ್ವೆ ಸಂಖ್ಯೆ 108 ರ ಉತ್ತರ ದಿಕ್ಕಿಗೆ ಹಳ್ಳವಿರುತ್ತದೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ವಾದಿಯು ಸಲ್ಲಿಸಿದ ನಕಾಶೆಯನ್ನು ತಿರಸ್ಕಾರ ಮಾಡಿ ನೈಜ ನಕಾಶೆಯ ಬಗ್ಗೆ ಉಲ್ಲೇಖಿಸಿಲ್ಲ ಹಾಗೂ ಹಾಜರು ಪಡಿಸಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**